ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

KARNATAK UNIVERSITY
University with Potential for Excellence
Pavate Nagar, **Dharwad**- Karnataka-India 580 003

Publication Dept
ಪ್ರಸಾರಾಂಗ ವಿಭಾಗ

ಕವಿವಿ:ಪ್ರಸಾರಾಂಗ:2025–26/ **: ಸುತ್ತೋಲೆ :** ದಿನಾಂಕ : **25–05–2025**

ಕ.ವಿ.ವಿ. ನಿಯತಕಾಲಿಕೆಗೆ ಹಾಗೂ ಕೃತಿಗಳಿಗೆ ಲೇಖನಗಳ ಆಹ್ವಾನ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ನಾತಕೋತ್ತರ ವಿಭಾಗ, ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಅಧ್ಯಾಪಕರ/ವಿದ್ಯಾರ್ಥಿಗಳ ಗಮನಕ್ಕೆ ತರಬಯಸುವುದೇನೆಂದರೆ ಕರ್ನಾಟಕ ವಿಶ್ವವಿದ್ಯಾಲಯದ ನಿಯತಕಾಲಿಕೆಗಳಿಗೆ ಸಂಶೋಧನಾತ್ಮಕ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ನಿರ್ದೇಶಕರು ಪ್ರಸಾರಾಂಗ ಕ.ವಿ.ವಿ.ಧಾರವಾಡ ಇವರಿಗೆ ದಿನಾಂಕ **30–06–2025** ರೊಳಗಾಗಿ ಲೇಖನ/ಕೃತಿಗಳನ್ನು ಕಳಿಸಲು ಕೋರಲಾಗಿದೆ.

1	ಕರ್ನಾಟಕ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ	ಸಂಶೋಧನಾತ್ಮಕ ಲೇಖನ/ಪುಸ್ತಕ ವಿಮರ್ಶೆ
2	ವಿದ್ಯಾರ್ಥಿ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ	ಸಂಶೋಧನಾ ಲೇಖನ/ಕತೆ/ಕವಿತೆ ವಿದ್ಯಾರ್ಥಿಗಳಿಗೆ ಮಾತ್ರ
3	ಕೆ.ಯು.ಜರ್ನಲ್ ಆಫ್ ಹ್ಯೂಮ್ಯಾನಿಟೀಜ್ – ವಾರ್ಷಿಕ ಸಂಚಿಕೆ	ಇಂಗ್ಲೀಷ್/ಹಿಂದಿ/ಮರಾಠಿ/ಸಂಸ್ಕೃತ/ಉರ್ದು/ಇತರೆ ಭಾಷೆಗಳ ಸಂಶೋಧನಾತ್ಮಕ ಲೇಖನ
4	ಕೆ.ಯು.ಜರ್ನಲ್ ಆಫ್ ಸೋಶಿಯಲ್ ಸಾಯನ್ಸ್ – ವಾರ್ಷಿಕ ಸಂಚಿಕೆ	ಈ ವಿಷಯಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿರಬೇಕು.
5	ಕೆ.ಯು.ಜರ್ನಲ್ ಆಫ್ ಸಾಯನ್ಸ್ – (ಇ–ಜರ್ನಲ್)ಪ್ರತಿ ವರ್ಷಕ್ಕೆ 4 ಸಂಚಿಕೆ	

2025–26 ನೇ ಸಾಲಿನ ಮೇಲಿನ ನಿಯತಕಾಲಿಕೆಗಳಲ್ಲಿ ಪ್ರಕಟಿಸಲು ಅನುಕೂಲವಾಗುವಂತೆ ಲೇಖನಗಳನ್ನು **6** ರಿಂದ **10** ಪುಟಗಳ ಮಿತಿಯಲ್ಲಿ ಸಿದ್ದಪಡಿಸಿ, ಪ್ರಸಾರಾಂಗಕ್ಕೆ ತಲುಪುವಂತೆ ಕಳಿಸುವುದು.

- ಕೆ.ಯು.ಜರ್ನಲ್ ಆಫ್ ಹ್ಯೂಮ್ಯಾನಿಟೀಜ್ ನಿಯತಕಾಲಿಕೆ ಲೇಖನ **A/4 Size** ನಲ್ಲಿ ಸಿದ್ಧಪಡಿಸಿ ಸಿ.ಡಿ. ಹಾಗೂ ಹಾರ್ಡ ಪ್ರತಿಯಲ್ಲಿ ಲೇಖನ ಕಳಿಸುವುದು.
- ಸೋಶಿಯಲ್ ಸಾಯನ್ಸ್ ಮತ್ತು ಸಾಯನ್ಸ್ ನಿಯತಕಾಲಿಕೆಗಳ ಲೇಖನಗಳನ್ನು **Box Formet** ನಲ್ಲಿ ಸಿದ್ಧಪಡಿಸಿ ಲೇಖಕರು ಲೇಖನಗಳ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಿಕೊಡುವುದು.
- ಕರ್ನಾಟಕ ಭಾರತಿ, ವಿದ್ಯಾರ್ಥಿ ಭಾರತಿ ನಿಯತಕಾಲಿಕೆಗಳಿಗೆ ಲೇಖನ ಕಳಿಸುವವರು ತಮ್ಮ ಲೇಖನವನ್ನು ನುಡಿಲಿಪಿ (ಪೇಜ್‌ಮೇಕರ್–ಬುಕ್ ಫಾರ್ಮೆಟ್‌ಗೆ) ಸಿದ್ಧಪಡಿಸಿ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಬೇಕು.
- ಸದರಿ ನಿಯತಕಾಲಿಕೆಗಳು **ISSN & Refereed Journal** ಆಗಿರುವುದರಿಂದ ಲೇಖನಗಳನ್ನು ವಿಷಯಕ್ಕೆ ಸಂಬಂಧಿಸಿದ ಪರಿಣಿತರಿಂದ ಪರಿಶೀಲಿಸಿ ಪ್ರಕಟಣೆಗೆ ಯೋಗ್ಯವಾದವುಗಳನ್ನು ಮಾತ್ರ ಪ್ರಕಟಿಸಲಾಗುವುದು. ಅಸ್ವೀಕೃತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಆ ಬಗ್ಗೆ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
- ನಿಯತಕಾಲಿಕೆಗಳಿಗೆ ಲೇಖನ ಕಳಿಸುವವರು ಲೇಖನದ ಜೊತೆ ಕೃತಿಚೌರ್ಯ ವರದಿಯನ್ನು (**Plagiarism Report**) ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
- ಕೆ.ಯು.ಜರ್ನಲ್ ಆಫ್ ಸಾಯನ್ಸ್ ನಿಯತಕಾಲಿಕೆಯನ್ನು ಇ–ಜರ್ನಲ್ ಆಗಿ ವೆಬ್‌ಸೈಟ್ ಮೂಲಕ ಪ್ರಕಟಿಸಲಾಗುತ್ತದೆ.
- ತಿರಸ್ಕೃತವಾದ ಲೇಖನಗಳಿಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

2025–2026ನೇ ಸಾಲಿಗೆ ಸಂಬಂಧಿಸಿದಂತೆ ಸಂಶೋಧನಾ ಕೃತಿ, ಕಥೆ, ಕಾದಂಬರಿ, ನಾಟಕ ಸಾಹಿತ್ಯಕ್ಕೆ ಸಂಬಂಧಿಸಿದಂತ ಕೃತಿಗಳನ್ನು ಪ್ರಸಾರಾಂಗದಿಂದ ಪ್ರಕಟಿಸಲು ಆಸಕ್ತವುಳ್ಳವರು ಹಸ್ತಪ್ರತಿಯನ್ನು ಬುಕ್‌ಫಾರ್ಮೆಟ್‌ನಲ್ಲಿ ಸಿದ್ದಪಡಿಸಿ ಸಿ.ಡಿ.ಯೊಂದಿಗೆ ಸಲ್ಲಿಸುವುದು. ವಿಶ್ವವಿದ್ಯಾಲಯದ ನಿಯಮಾನುಸಾರ ಪರಿಶೀಲನೆಗೊಳಪಡಿಸಿದ ನಂತರ ಪ್ರಕಟಣೆಗೆ ಕೈಗೆತ್ತಿಕೊಳ್ಳಲಾಗುವುದು.

ಆ) ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರಗಳಲ್ಲಿ ಅಧ್ಯಾಪಕರು ಪಾಲ್ಗೊಳ್ಳುವ ಬಗ್ಗೆ:

ಪ್ರತಿವರ್ಷದಂತೆ **2025–26**ನೇ ಸಾಲಿನಲ್ಲಿ ಪ್ರಸಾರಾಂಗ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಜನಸಾಮಾನ್ಯರಿಗೆ ಉಪಯುಕ್ತವೆನಿಸುವ ವಿಷಯಗಳ ಬಗ್ಗೆ ಉಪನ್ಯಾಸ ನೀಡಬಯಸುವ ಅಧ್ಯಾಪಕರು ತಮ್ಮ ವಿಷಯ ಹಾಗೂ ವಿಳಾಸದೊಂದಿಗೆ ನಿರ್ದೇಶಕರು ಪ್ರಸಾರಾಂಗ ಕ.ವಿ.ವಿ. ಧಾರವಾಡ ಇವರಿಗೆ ದಿನಾಂಕ **30 ಜೂನ್ 2025** ರ ಒಳಗಾಗಿ ತಮ್ಮ ಅರ್ಜಿ ಸಲ್ಲಿಸಬಹುದಾಗಿದೆ. ಹಾಗೂ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಬಯಸುವ ಸಂಘ, ಸಂಸ್ಥೆ, ಮಹಾವಿದ್ಯಾಲಯದವರು ನಿರ್ದೇಶಕರು ಪ್ರಸಾರಾಂಗ ಕ.ವಿ.ವಿ.ಧಾರವಾಡ ಇವರಿಗೆ ಪತ್ರದ ಮೂಲಕ ಕೋರಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ.ಸಿದ್ದಪ್ಪ ಎನ್. ಸಹಾಯ ನಿರ್ದೇಶಕರು, ಪ್ರಸಾರಾಂಗ ವಿಭಾಗ, ಕ.ವಿ.ವಿ.ಧಾರವಾಡ ಮೊ.ನಂ. **9480295866** ಸಂಪರ್ಕಿಸಬಹುದಾಗಿದೆ.

ನಿರ್ದೇಶಕರು
ಪ್ರಸಾರಾಂಗ

ಪ್ರತಿ : 1) ಮುಖ್ಯಸ್ಥರು ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬರುವ ಎಲ್ಲ ಅಧೀನ/ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ
3) ನಿರ್ದೇಶಕರು, ಐ.ಟಿ.ವಿಭಾಗ, ಕ.ವಿ.ವಿ.ಧಾರವಾಡ (ಸುತ್ತೋಲೆಯನ್ನು ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು)